

'ಅಬ್ಬ...! ಇವತ್ತು ನಾನೇ ಸುರುವಿನವಳಾದೆ. ಇನ್ನು ನಂಗೆ ತಿಂಡಿ ಗ್ಯಾರಂಟಿ ಸಿಕ್ತದೆ. ಯಾರು ಸಾ ನಡುವೆ ಸೇರಿಕೊಳ್ಳಿಕ್ಕೆ ಆಗೂದಿಲ್ಲ. ನಾನಂತೂ ಸುರೂವಿನವಳಾದೆ. ಇನ್ನು ಯೆಂತ ಬೇಕಾದರೂ ಆಗ್ಲಿ' ಅಂತ ಎಣಿಸಿಕೊಂಡಳು ರಾಜೀವಿ. ಮಹಿಳೆಯರ ಸಾಲು ಅಂತ ಬೋರ್ಡ್ ಹಾಕಿದ್ದರ ಕೆಳಗೆ ಗುರುತಿಗೆ ಅಂತ ತನ್ನ ಮೆಟ್ಟನ್ನು ಇಟ್ಟಳು. ಉಸ್ಸಪ್ಪಾ ಅಂತ ಅಲ್ಲಿಯೇ ಇದ್ದ ಕಟ್ಟೆಯಲ್ಲಿ ಕೂತಳು. ಬೆಳಿಗ್ಗೆ ನಾಕೂವರೆಗೇ ಎದ್ದು ಹಾಗೆಯೇ ರುಮುರುಮು ರುಮು ಅಂತ ಬೀಸ ಬೀಸ ಒಂದೇ ದಮ್ಮಿನಲ್ಲಿ ನಡ್ಕೊಂಡು ಎಂಟು ಹತ್ತು ಕಿಲೋಮೀಟರ್ ನಡ್ಕೊಂಡು ಬಂದದ್ರಿಂದ ಅವಳಿಗೆ ಸಾಕಾಗಿತ್ತು. ಬೆವರಿ ಚಂಡಿ ಆಗಿದ್ದಳು. ಸೆರಗಿನಲ್ಲಿ ಗಾಳಿ ಹಾಕಿಕೊಂಡಳು. ಮುಖ, ಕುತ್ತಿಗೆ ಎಲ್ಲ ಒರೆಸಿಕೊಂಡಳು. ಬಾಟ್ಳಿಯಲ್ಲಿ ತಂದಿದ್ದ ನೀರು ಕುಡಿದಳು. ಅಯ್ಯಬ್ಬ ಅನಿಸಿತು. ಮೊಬೈಲಿನಲ್ಲಿ ಗಂಟೆ ಎಷ್ಟು ಆಯಿತು ಅಂತ ನೋಡಿದಳು. ಆಗಷ್ಟೇ ಆರೂಕಾಲು. ಇನ್ನೂ ಒಂದು ಗಂಟೆಯ ಮೇಲೆ ಉಂಟು ತಿಂಡಿ ಕೊಡಲಿಕ್ಕೆ. ಎಷ್ಟುಹೊತ್ತಿಗೆ ತಿಂಡಿ ಕೊಡ್ತಾರಾ? ಹಸಿವು ಯಾವಾಗ ಆರ್ತದಾ ಅಂತ ದೊಡ್ಡದಾಗಿ ಸ್ವಾಸ ಬಿಟ್ಟಳು. ಬೇರೆದಾರಿ ಇಲ್ಲ, ಗಂಟೆ ಆಗುವವರೆಗೆ ಕಾಯಲೇಬೇಕು ಅಂತ ಎಣಿಸಿದಳು. ಮೇ ತಿಂಗಳ ಅಂತ್ಯ ಬೇರೆ ಆದದ್ದರಿಂದ ಸೆಕೆ ಕಂಡಾಬಟ್ಟೆ ಇತ್ತು. ಮುಖದ ಮಾಸ್ಕನ್ನು ತೆಕ್ಕೊಂಡು ರಪ ರಪ ಅಂತ ಗಾಳಿ ಹಾಕ್ಕೊಂಡ್ಳು.

ಅಷ್ಟು ಹೊತ್ತಿಗೆ ಸೆಕ್ಯುರಿಟಿಯವ ವಿಸಿಲ್ ಊದಿ, 'ಹೋಯ್ ಯಾರಲ್ಲಿ? ಮಾಸ್ಕ್ ಹಾಕಿಕೊಳ್ಳದೇ ಕೂತದ್ದು?. ಮಾಸ್ಕ್ ಹಾಕಿ! ಕ್ಯೂನಲ್ಲಿ ನಿಂತ ಗಂಡಸರು ದೂರ ದೂರ ನಿಲ್ಲಿ' ಅಂತ ಜೋರು ಬಾಯಿ ಮಾಡ್ತಾ ಬಂದ. ಟಾರ್ಚಿನ ಫೋಕಸ್ ಬೆಳಕು ರಾಜೀವಿಯ ಮುಖಕ್ಕೆ ಬಿತ್ತು. ಅವಳು ಕೈ ಅಡ್ಡ ಹಿಡ್ಕೊಂಡಳು. ಅವ ರಾಜೀವಿಯ ಮುಖ ನೋಡಿ, 'ಓ ಅಕ್ಕಾ ನೀವಾ?... ನಿನ್ನೆ ತಿಂಡಿ ಸಿಕ್ಕಿರ್ಲಿಲ್ಲ ಅಂತ ಇವತ್ತು ಬೇಗ ಬಂದ್ರಾ?' ಅಂತ ರಾಗ ಎಳೆದ. ಅವಳು ಹೂಂ ಅಂದಳು. 'ನನ್ನನ್ನು ಸ್ವಲ್ಪ ನೋಡಿಕೊಳ್ತಿದ್ರೆ, ಚಾ ಕುಡೀಲಿಕ್ಕೆ ಅಂತ ಒಂದು ಹತ್ತು ರುಪಾಯಿ ಕೊಡ್ತಿದ್ರೆ ನಿಮ್ಮನ್ನು ಲೈನಿನಲ್ಲಿ ನಡುವೆ ತೂರಿಸಿ ಬಿಡ್ತಿದ್ದೆ' ಅಂತ ಹೇಳಿದ ತನ್ನ ಕೊಳಕಾದ ಹಲ್ಲನ್ನು ತೋರಿಸ್ತಾ. ಅವಳು ಅಡ್ಡ ಮುಖ ಹಾಕಿದಳು. ತನ್ನ ಹಾಗೆ ವಯಸ್ಸಾದವಳ ಹತ್ರ ಒಂದು ನಮೂನಿ ನೋಡ್ತಾ ಹಲ್ಲುಬಿಡುವ ಅವನನ್ನು ನೋಡಿ ಹೇಸಿಗೆ ಆಯಿತು ಅವಳಿಗೆ. 'ನಂಗೆ ಚೂರು ಕೆಲಸ ಉಂಟು, ಆಚೆ ಹೋಗಿ ಬರ್ತೇನೆ' ಅಂತ ಅಲ್ಲಿಂದ ಎದ್ದಳು. 'ನೀವು ಹೋದರೆ ನಿಮ್ಮ ತಿಂಡಿಯ ಕತೆ? ಇವತ್ತು ಕಂಡಾಪಟ್ಟೆ ಜನ ಆಗುವ ಹಾಗೆ ಕಾಣ್ತಾ ಉಂಟು. ಮತ್ತೆ ನಿನ್ನೆಯ ಹಾಗೆ ಸಿಗದೇ ಹೋಗಬಹುದು' ಅಂತ ಅವಳ ಬಗ್ಗೆ ಭಾರೀ ಕಾಳಜಿ ಇದ್ದವನ ಹಾಗೆ ಹೇಳಿದ. 'ಇಲ್ಲ ಎಂಥದು ಸಾ ತೊಂದರೆ ಆಗೂದಿಲ್ಲ. ಗುರುತಿಗೆ ಅಂತ ಮೆಟ್ಟು ಇಟ್ಟಿದ್ದೇನೆ. ಓ ಅಲ್ಲಿ ಸುರೂವಿಗೆ ಕಾಣ್ತದೆ ಅಲ್ವಾ? ಸ್ಲಿಪ್ಪರ್ ಮೆಟ್ಟು ಅದು ನಂದೇ' ಅಂತ ಆತ್ಮವಿಶ್ವಾಸದಿಂದ ಹೇಳಿದಳು. ಹಾಗೆ ಹೇಳುವಾಗ ಇವತ್ತು ಎಂತ ಮಾಡಿದ್ರೂ ತಿಂಡಿ ಸಿಗೂದನ್ನು ತಪ್ಪಿಸ್ಲಿಕ್ಕೆ ಯಾರಿಂದಲೂ ಸಾಧ್ಯ ಇಲ್ಲ ಅನ್ನುವ ವಿಶ್ವಾಸ ಅವಳ ಮಾತಿನಲ್ಲಿತ್ತು. ಅವ 'ಓ.. ಹೌದಾ?' ಅಂತ ರಾಗ ಎಳೆದ.

ರಾಜೀವಿ ಸೆಕ್ಯುರಿಟಿಯವನಿಂದ ತಪ್ಪಿಸಿಕೊಂಡು ಎದ್ದವಳು ಒಂದು ಕಂಬದ ಎಡೆಯಲ್ಲಿ ಕೂತಳು. ಹಾಗೆ ಕೂತರೂ ಅವಳ ಕಣ್ಣು ಮೆಟ್ಟಿನ ಮೇಲೆಯೇ ಇತ್ತು. ಈ ದರಿದ್ರ ಕೊರೊನಾ ಎಂಥದೆಲ್ಲ ಮಾಡಿ ಹಾಕಿತು? ಇಂಥದೊಂದು ಕಾಲ ಬರ್ತದೆ ಅಂತ ಕನಸು ಮನಸಿನಲ್ಲಿ ಸಾ ಎಣಿಸಿರಲಿಲ್ಲ. ಎಲ್ಲ ಕಡೆ ಮುಖ ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಬಂತು. ನಿನ್ನೆಯ ದಿವಸ ತಿನ್ಲಿಕ್ಕೆ ಎಂಥದು ಅಂದ್ರೆ ಎಂಥದು ಇರ್ಲಿಲ್ಲ. ಆಗ ದೊಡ್ಡ ಮೊಮ್ಮಗಳು, 'ಅಜ್ಜೀ ನಾವು ಸಾ ಕೊರೊನಾ ಬಂದಿದೆ ಅಂತ ಹೇಳಿ ಕೋವಿಡ್ ಕ್ಯಾರ್ ಸೆಂಟರಿಗೆ ಸೇರಿಕೊಳ್ಳುವ. ಅಲ್ಲಿ ಊಟ ತಿಂಡಿ ಎಲ್ಲ ಫ್ರೀಯಾಗಿ ಕೊಡ್ತಾರಂತೆ' ಅಂತ ಹೇಳಿದ್ದಳು.